ಪರಿಶಿಷ್ಟ ಜಾತಿ/ವರ್ಗಗಳ ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಿಸುವುದು.

110 (194)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪರಿಶಿಷ್ಟಜಾತಿ/ಪರಿಶಿಷ್ಟವರ್ಗದ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಅವುಗಳ ಸ್ವಂತ ಕಟ್ಟಡ ಹೊಂದಿರುವ ವಿದ್ಯಾರ್ಥಿನಿಲಯಗಳೆಷ್ಟು ಹಾಗೂ ಬಾಡಿಗೆ ಕಟ್ಟಡದಲ್ಲಿರುವ ವಿದ್ಯಾರ್ಥಿನಿಲಯಗಳೆಷ್ಟು?

ಇ) ಈ ವಿದ್ಯಾರ್ಥಿನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)

ಈ) ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):

ಅ) ಸಮಾಜ ಕಲ್ಯಾಣ ಇಲಾಖಾವತಿಯಿಂದ ರಾಜ್ಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟವರ್ಗದ ವಿದ್ಯಾರ್ಥಿಗಳಿಗಾಗಿ ಒಟ್ಟು 1147 ಸರ್ಕಾರಿ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ. ಜಿಲ್ಲಾವಾರು ಮಾಹಿತಿಯನ್ನು ಕೆಳಕಂಡಂತೆ ನೀಡಿದೆ:

ಕ್ರ. ಸಂ.	ಜಿಲ್ಲೆಗಳ ವಿವರ	ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯ			ಪ.ಜಾ.:ಪ.ವರ್ಗ ಮೆ. ನಂತರದ ವಿದ್ಯಾರ್ಥಿನಿಲಯ	ಒಟ್ಟು
		ಪ.ಜಾ	ಪ.ವರ್ಗ	ಒಟ್ಟು		
1.	ಬೆಂಗಳೂರು(ನ)	30	-	30	9	39
2.	ಬೆಂಗಳೂರು (ಗ್ರಾ)	42	1	43	4	47
3.	ಕೋಲಾರ	72	-	72	14	86
4.	ತುಮಕೂರು	51	1	52	16	68
5.	ಚಿತ್ರದುರ್ಗ	53	3	56	17	73

6. ಶಿವಮೊಗ್ಗ	47	1	48	8	56
7. ಮೈಸೂರು	54	9	63	18	81
8. ಮಂಡ್ಯ	39	-	39	7	46
9. ಹಾಸನ	49	-	49	4	53
10. ಚಿಕ್ಕಮಗಳೂರು	29	3	32	5	37
11. ದಕ್ಷಿಣ ಕನ್ನಡ	33	9	42	3	45
12. ಕೊಡಗು	18	9	27	3	30
13. ಬೆಳಗಾಂ	52	2	54	3	57
14. ಧಾರವಾಡ	68	1	69	9	78
15. ಬಿಜಾಪುರ	69	-	69	4	73
16. ಉತ್ತರ ಕನ್ನಡ	27	-	27	1	28
17. ಗುಲ್ಬರ್ಗಾ	74	2	76	14	90
18. ರಾಯಚೂರು	53	-	53	8	61
19. ಬೀದರ್	34	-	34	11	45
20. ಬಳ್ಳಾರಿ	46	2	48	6	54
ಒಟ್ಟು	940	43	983	164	1147

ಆ) ರಾಜ್ಯದಲ್ಲಿರುವ 1147 ವಿದ್ಯಾರ್ಥಿನಿಲಯಗಳಲ್ಲಿ 689 ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡದಲ್ಲಿ ಹಾಗೂ 458 ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡದಲ್ಲಿ ನಡೆಸಲಾಗುತ್ತಿದ್ದು ಅದರ ವಿವರ ಕೆಳಕಂಡಂತಿದೆ:

ವಿದ್ಯಾರ್ಥಿನಿಲಯಗಳ ವಿವರ.	ಒಟ್ಟು ವಿ. ನಿಲಯಗಳ ಸಂಖ್ಯೆ	ಈ ಪೈಕಿ ಸರ್ಕಾರಿ ಕಟ್ಟಡ ಹೊಂದಿರುವ ವಿ.ನಿ. ಸಂಖ್ಯೆ	ಬಾಡಿಗೆ ಕಟ್ಟಡದಲ್ಲಿರುವ ವಿ.ನಿ. ಸಂಖ್ಯೆ	ನಿರ್ಮಾಣ ಹಂತದಲ್ಲಿರುವ ಕಟ್ಟಡಗಳ ಸಂಖ್ಯೆ
1. ಪ.ಜಾ/ಪ.ವರ್ಗ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳು	983	647	336	132
2. ಪ.ಜಾ/ಪ.ವರ್ಗ ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯಗಳು	164	42	122	14
ಒಟ್ಟು	1147	689	458	147

ಇ) ಈ 1147 ವಿದ್ಯಾರ್ಥಿನಿಲಯಗಳಲ್ಲಿ ಒಟ್ಟು 71.744 ಪರಿಶಿಷ್ಟಜಾತಿ/ಪರಿಶಿಷ್ಟವರ್ಗದ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಜಿಲ್ಲಾವಾರು ಮಾಹಿತಿ ಕೆಳಕಂಡಂತಿದೆ:

ಕ್ರ. ಸಂ.	ಜಿಲ್ಲೆಗಳ ವಿವರ	ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ			ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ	ಒಟ್ಟು ವಿದ್ಯಾರ್ಥಿಗಳ ಸಂಖ್ಯೆ
		ಪ.ಜಾ	ಪ.ವರ್ಗ	ಒಟ್ಟು		
1.	ಬೆಂಗಳೂರು (ನ)	1765	-	1765	1100	2865
2.	ಬೆಂಗಳೂರು (ಗ್ರಾ)	2710	75	2785	200	2985
3.	ಕೋಲಾರ	4336	-	4336	1150	5486
4.	ತುಮಕೂರು	3028	50	3073	1600	4673

5. ಚಿತ್ರದುರ್ಗ	2725	150	2875	1950	4825
6. ಶಿವಮೊಗ್ಗ	2613	35	2648	600	3248
7. ಮೈಸೂರು	3910	467	4377	1575	5952
8. ಮಂಡ್ಯ	2482	-	2482	525	3000
9. ಹಾಸನ	2971	-	2971	250	3221
10. ಚಿಕ್ಕಮಗಳೂರು	2100	127	2227	410	2637
11. ದಕ್ಷಿಣ ಕನ್ನಡ	1933	417	2350	200	2550
12. ಕೊಡಗು	783	438	1271	150	142
13. ಬೆಳಗಾಂ	2611	100	2711	250	2961
14. ಧಾರವಾಡ	3735	50	3785	550	4335
15. ಬಿಜಾಪುರ	3605	-	3605	300	3905
16. ಉತ್ತರ ಕನ್ನಡ	1178	-	1178	50	1228
17. ಗುಲ್ಬರ್ಗಾ	4820	100	4920	1550	6470
18. ರಾಯಚೂರು	2945	-	2945	530	3475
19. ಬೀದರ್	2550	-	2550	550	3100
20. ಬಳ್ಳಾರಿ	2900	100	3000	400	3400
ಒಟ್ಟು	55695	2159	57854	13890	71744

ಈ) ಕಳೆದ 3 ವರ್ಷಗಳಲ್ಲಿ ಸರ್ಕಾರ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ ಹೆಚ್ಚಿನ ಮಹತ್ವ ನೀಡಿದ್ದು. ಕಳೆದ 3 ವರ್ಷಗಳಲ್ಲಿ 140 ವಿದ್ಯಾರ್ಥಿನಿಲಯಗಳ ಕಟ್ಟಡಗಳನ್ನು ಪೂರ್ಣಗೊಳಿಸಿವೆ. ಅಲ್ಲದೆ 147 ಕಟ್ಟಡಗಳು ನಿರ್ಮಾಣದ ವಿವಿಧ ಹಂತದಲ್ಲಿದೆ. ಇವುಗಳಲ್ಲಿ 18 ಕಟ್ಟಡಗಳನ್ನು ಮಾರ್ಚ್ 98ರ ಅಂತ್ಯದೊಳಗೆ ಹಾಗೂ 80 ಕಟ್ಟಡಗಳನ್ನು 98-99ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಿದೆ. ಅದಕ್ಕೆ ತಕ್ಕಂತೆ ಹಣದ ವ್ಯವಸ್ಥೆ

ಮಾಡಲಾಗಿದೆ. ಈ ವರ್ಷ ಇನ್ನೂ 75 ಕಟ್ಟಡಗಳ ಕೆಲಸವನ್ನು ಪ್ರಾರಂಭಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಈರೀತಿ 9ನೇ ಪಂಚವಾರ್ಷಿಕ ಯೋಜನೆ ಮುಗಿಯುವ ಒಳಗೆ ಸರ್ಕಾರದ ಎಲ್ಲಾ ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ಹೊಂದುವ ಪ್ರಯತ್ನ ಮಾಡುತ್ತಿದ್ದೇವೆ.

ಮಂಗಳೂರು ಮಹಾನಗರ ಪಾಲಿಕೆಗೆ ಬಿಡುಗಡೆ ಮಾಡಿರುವ ಅನುದಾನ

111 (221)

ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ಪೌರಾಡಳಿತ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರಸ್ತುತ ಖಾಲಿಯಿರುವ ಸಿಬ್ಬಂದಿಗಳ ಅಧಿಕಾರಿಗಳ ಹಾಗೂ ಎಂಜಿನಿಯರುಗಳ ಹುದ್ದೆಗಳೆಷ್ಟು?

ಆ) ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಇ) 1997-98ರಲ್ಲಿ ರಾಜ್ಯ ಸರ್ಕಾರದವರು ಮಂಗಳೂರು ಮಹಾನಗರ ಪಾಲಿಕೆಗೆ ಬಿಡುಗಡೆ ಮಾಡಿದ ಅನುದಾನ ಎಷ್ಟು ಬಾಕಿಯಿರುವ ಅನುದಾನ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಮಿರಾಜುದ್ದೀನ್ ಎನ್.ಪಟೇಲ್ (ಪೌರಾಡಳಿತ ಸಚಿವರು):

ಅ)

1.	'ಎ' ಗ್ರೂಪ್ ಹುದ್ದೆಗಳು	2
2.	'ಬಿ' ಗ್ರೂಪ್ ಹುದ್ದೆಗಳು	1
3.	'ಸಿ' ಗ್ರೂಪ್ ಹುದ್ದೆಗಳು	151
4.	'ಡಿ' ಗ್ರೂಪ್ ಹುದ್ದೆಗಳು	123
	ಒಟ್ಟು	277

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) 1997-98ನೇ ಸಾಲಿನಲ್ಲಿ ಇದುವರೆವಿಗೆ ರೂ.7,63,28,303-00ಗಳನ್ನು ಬಿಡುಗಡೆ ಮಾಡಿದೆ. (ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬಿಡುಗಡೆ ಮಾಡಿದ ಮೊತ್ತ ರೂ.25. ಲಕ್ಷಗಳನ್ನು ಹೊರತುಪಡಿಸಿ)